

# ದ್ವೇಷ ಕಿತ್ತು ಹಾಕಿ

ಒಂದು ಶಾಲೆಯ ಉತ್ಸಾಹಿ ಅಧ್ಯಾಪಕಿಯೊಬ್ಬರು ಒಮ್ಮೆ ವಿದ್ಯಾರ್ಥಿಗಳಿಗೆ, 'ಮಕ್ಕಳೇ, ನಾವಿಂದು ಹೊಸ ಬಗೆಯ ಆಟವನ್ನು ಆಡೋಣವೇ? ಆಟ ಬಹಳ ಸರಳವಾದದ್ದು. ನಾಳೆ ಶಾಲೆಗೆ ಬರುವಾಗ ನೀವೆಲ್ಲ ಒಂದು ಪ್ಲಾಸ್ಟಿಕ್ ಚೀಲವನ್ನು ತರಬೇಕು. ಅದನ್ನು ಖಾಲಿ ತರಬಾರದು. ತುಂಬಿಸಿ ತರಬೇಕು' ಎಂದು ಹೇಳಿದರು.

ಮಕ್ಕಳೆಲ್ಲಾ ಒಕ್ಕೊರಲಿನಿಂದ 'ಪ್ಲಾಸ್ಟಿಕ್ ಚೀಲದಲ್ಲಿ ಏನು ತುಂಬಿಸಿ ತರಬೇಕು? ಎಷ್ಟು ತುಂಬಿಸಿ ತರಬೇಕು? ಹೇಳಿ' ಎಂದು ಕೇಳಿದರು. ಅಧ್ಯಾಪಕಿ 'ನಿಮ್ಮೆಲ್ಲರ ಮನೆಗಳಲ್ಲಿ ಬದನೆಕಾಯಿ ಇರುತ್ತದಲ್ಲವೇ? ನೀವು ಯಾರೂ ಅದನ್ನು ಕಾಸು ಕೊಟ್ಟು ಕೊಂಡುಕೊಳ್ಳಬೇಕಾಗಿಲ್ಲ. ಪ್ಲಾಸ್ಟಿಕ್ ಚೀಲಗಳಲ್ಲಿ ಬದನೆಕಾಯಿಗಳನ್ನು ಹಾಕಿಕೊಂಡು ಬನ್ನಿ' ಎಂದರು.

ಇನ್ನು ಎಷ್ಟು ತರಬೇಕೆನ್ನುವ ಪ್ರಶ್ನೆಗೆ 'ನಿಮಗೆ ಯಾರ ಬಗ್ಗೆಯಾದರೂ ದ್ವೇಷ ಭಾವನೆ ಇದ್ದರೆ, ಅವರ ಸಂಖ್ಯೆಯನ್ನು ಲೆಕ್ಕಹಾಕಿ. ಇಬ್ಬರ ಮೇಲೆ ದ್ವೇಷ ಇದ್ದರೆ ಎರಡು, ಮೂವರ ಬಗ್ಗೆ ದ್ವೇಷವಿದ್ದರೆ ಮೂರು ಬದನೆಕಾಯಿ.. ಹೀಗೆ ಲೆಕ್ಕ ಹಾಕಿ ಅಷ್ಟಷ್ಟು ಬದನೆಕಾಯಿಗಳನ್ನು ತರಬೇಕು. ನಾಳೆ ನೀವದನ್ನು ತಂದ ಮೇಲೆ ಆಟವೇನೆಂದು ಹೇಳುತ್ತೇನೆ' ಎಂದರು.

ಮಕ್ಕಳಿಗೆಲ್ಲ ಆಟವೇನಿರಬಹುದೆಂಬ ಕುತೂಹಲ!

ಮಾರನೆಯ ದಿನ ಎಲ್ಲರೂ ಬದನೆಕಾಯಿಗಳು ತುಂಬಿರುವ ಒಂದೊಂದು ಪ್ಲಾಸ್ಟಿಕ್ ಚೀಲವನ್ನು ತಂದಿದ್ದರು. ಒಬ್ಬ ವಿದ್ಯಾರ್ಥಿ 'ನಮ್ಮ ಮೇಲಿನ ತರಗತಿಯ ಇಬ್ಬರು ಹುಡುಗರ ಬಗ್ಗೆ ನನಗೆ ದ್ವೇಷ. ಅವರು ಯಾವಾಗಲೂ ನನ್ನನ್ನು ಛೇಡಿಸುತ್ತಾರೆ. ನಾನು ಎರಡು ಬದನೆಕಾಯಿಗಳನ್ನು ತಂದಿದ್ದೇನೆ' ಎಂದ. ಮತ್ತೊಬ್ಬ ಆರು ಬದನೆಕಾಯಿಗಳನ್ನು ತಂದಿದ್ದ. ಅದಕ್ಕೆ ವಿವರಣೆಯನ್ನೂ ಕೊಟ್ಟ. ಹೀಗೆ ಎಲ್ಲರೂ ಬದನೆಕಾಯಿಗಳಿದ್ದ ಚೀಲಗಳನ್ನು ತಂದಿದ್ದರು.

ಅಧ್ಯಾಪಕಿ ಎಲ್ಲರ ಚೀಲಗಳನ್ನು ನೋಡಿದರು. ಅನಂತರ ಎಲ್ಲರಿಗೂ ಒಂದೊಂದು ದಾರವನ್ನು ಕೊಟ್ಟು ಚೀಲವನ್ನು ಭದ್ರವಾಗಿ ಕಟ್ಟಿ ಮುಚ್ಚಿಟ್ಟು ಮಾರನೆಯ ದಿನ ಹಾಗೆಯೇ ತೆಗೆಯದೆ ತರಲು ಹೇಳಿದರು.

ಅವರು ಹೀಗೆಯೇ ಎಂಟು ದಿನಗಳ ಕಾಲ ಮಾಡಿಸಿದರು. ಒಂಬತ್ತನೆಯ ದಿನ ವಿದ್ಯಾರ್ಥಿಗಳೆಲ್ಲ 'ಬದನೆಕಾಯಿಗಳು ಕೆಟ್ಟು ಕೊಳೆತು ನಾರುತ್ತಿವೆ. ಅದರ ದುರ್ವಾಸನೆಗೆ ಮನೆಯವರೆಲ್ಲ ನಮ್ಮನ್ನು ಬೈಯ್ಯುತ್ತಿದ್ದಾರೆ. ದಯವಿಟ್ಟು ಆಟದ ಅರ್ಥವೇನು ತಿಳಿಸಿ' ಎಂದು ಒಟ್ಟಾಗಿ ಕೇಳಿದರು.

ಆಗ ಅಧ್ಯಾಪಕಿ 'ನೀವು ಯಾರು ಯಾರ ಬಗ್ಗೆ ದ್ವೇಷವಿಟ್ಟುಕೊಂಡಿದ್ದೀರೋ ಅಷ್ಟಷ್ಟು ಬದನೆಕಾಯಿಗಳನ್ನು ತಂದಿದ್ದೀರಿ. ನಿಮ್ಮ ದ್ವೇಷ ಭಾವನೆ ಆ ಬದನೆಕಾಯಿಯ ಹಾಗೆ. ಅದನ್ನು ಚೀಲದಲ್ಲಿ ಹಾಕಿ ಮುಚ್ಚಿಟ್ಟರೆ ಅದು ಕೊಳೆತು ನಾರುತ್ತದೆ. ಹಾಗೆಯೇ ಈ ದ್ವೇಷ ಭಾವನೆಯೂ ನಿಮ್ಮ ಮನಸ್ಸನ್ನು ಹಾಳು ಮಾಡುತ್ತದೆ. ನೀವು ಯಾರನ್ನು ದ್ವೇಷಿಸುತ್ತೀರೊ ಅವರು ತಮ್ಮ ಪಾಡಿಗೆ ಸುಖವಾಗಿರುತ್ತಾರೆ. ಆದರೆ ನಿಮ್ಮ ಮನಸ್ಸಿನಲ್ಲಿರುವ ದ್ವೇಷ ಭಾವನೆಗಳು ನಿಮ್ಮನ್ನು ಸುಖವಾಗಿರಲು ಬಿಡುವುದಿಲ್ಲ. ಬನ್ನಿ ಮಕ್ಕಳೇ ನಿಮ್ಮ ಮನಸ್ಸಿನಲ್ಲಿರುವ ದ್ವೇಷಭಾವನೆಗಳನ್ನು ಇಂದೇ ಕಿತ್ತೊಗೆಯಿರಿ. ನಿರಾಳವಾಗಿ ಬದುಕಲು ಇದೇ ಸುಲಭ ಸಾಧನ' ಎಂದರು.

**-ವಿ. ಹೇಮಂತಕುಮಾರ, ಬೆಂಗಳೂರು**